1-30 P.M.

Laying of Rural Communication Roads

74. Sri CHOWDA REDDY (Chintamani).—Will the Minister for Public Works be pleased to state :—

(a) the limit of expenditure per kilometre prescribed for laying of Rural Commun cation roads under '50 miles road programme';

(b) whether it has come to the notice of Government that the amount earmarked is quite inadequate to meet the construction cost ;

(c) whether there is any proposal before Government to increase the cost per Kilometre according to the actual need ?

SRI H. M. CHANNABASAPPA (Minister for Public Works).—

(a) The limit of expenditure as detailed in the Statement to Government Order No. PWD 127 CRM 72, dated 31st August 1972 is appended. A limit of Rs. 7500 per Km. on an average is fixed for improvement to roads included in this programme.

(b) The ceiling limit fixed has become inadequate in certain cases where formation is to be done in hilly areas, sandy areas, and Malnad areas.

(c) Provision has been made in the Government Order No. PWD 127 CRM 72, dated 31st August 1972 (Statement to the Govt. Order is appended hearith) for incurring expenditure is excess of the ceiling after obtaining prior approval of Government.

STATEMENT

TO GOVERNMENT ORDER NO. PWD 127 CRM 72, DATED 31ST AUGUST 1972.

INTEGRATED AND COMPREHENSIVE

RURAL COMMUNICATION PROGRAMME

Abstract cost of construction of Rural Roads for the three phases-Cost per KM length

Sl. No.	Type of Soil	I Phase works: Formation 18 feet width 15 inches height and check-drains	I Phase works: 9 inches thick murum casing	II Phase works: Construction of hume pipe culverts at 3 Nos.	II Phase works: Total (3+4+5)	II Phase works: Gravelling carriageway	III Phase works: Construction of masonry culverts at 2 Nos. 5 feet span	III Phase works: Total (7+8)	III Phase works: Metalling (soling 4 inches+metaling 3"	Total cost (6+9+10)
		Rs.	Rs.	Rs.	Rs.	Rs.	Rs.	Rs.	Rs.	Rs.
1.	Gravelly Soil	5,500	...	3,900(*a*)	9,400	(*b*)	4,400 (*c*)	4,400	8,500	22,300
2.	Ordinary Soil	5,100	...	3,900	9,000	2,500(*d*)	4,400	6,900	8,750	24,650
3.	Black Cotton Soil	3,000 (*e*)	10,000	3,900	16,900		4,400	4,400	9,000	30 300

Remarks :—

(*a*) Hume pipe culverts at 3 works per K. M. at Rs. 1,300 each.

(*b*) Gravelling carriageway is not necessary for roads in gravelly soil.

(*c*) Masonry culverts at 2 works per K. M. at Rs. 2,200 each. Bridges having a linear waterway of 20 feet and above are to be taken up outside this programme.

(*d*) If metalling is done simultaneously with II phase, gravelling is not necessary.

(*e*) The formation height in black cotton soil is 9 inches only, since gravel casing shall be provided simultaneously.

ಶ್ರೀ ಚೌಡರೆಡ್ಡಿ.—ನನ್ನ ಪ್ರಶ್ನೆಗೆ ಉತ್ತರವಾಗಿ ಈ ಕಾರ್ಯಕ್ರಮದಲ್ಲಿ ಸೇರಿಸಿರುವ ರಸ್ತೆಗಳನ್ನು ಉತ್ತಮಪಡಿಸುವುದಕ್ಕಾಗಿ ಸರಾಸರಿ ಕಿಲೋಮೀಟರ್ ಒಂದಕ್ಕೆ ೭೫೦೦ ರೂಪಾಯಿಗಳ ಮಿತಿಯಂನ್ನು ಗೊತ್ತುಪಡಿಸಲಾಗಿದೆ ಎಂದು ಹೇಳಿದ್ದೀರಿ, ಆ ಮೇಲೆ ಗುಡ್ಡಗಾಡು, ಮರಳು ಹಾಗೂ ಮಲೆನಾಡು ಪ್ರದೇಶದಲ್ಲಿ ನಿರ್ಮಾಣ ಮಾಡಿದ ಕೆಲವು ಪ್ರಕರಣಗಳಲ್ಲಿ ಗೊತ್ತುಪಡಿಸಿರುವ ಗರಿಷ್ಠಮಿತಿಯು ಸಾಕಷ್ಟಿಲ್ಲದ್ದಾಗಿದೆ ಎಂದೂ ಸರ್ಕಾರದವರ ಅನುಮೋದನೆಯನ್ನು ಪಡೆದು ಮುಂಚಿತವಾಗಿ ವೆಚ್ಚ ಮಾಡಲು ಸರ್ಕಾರದ ಆದೇಶದಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ ಎಂದು ಹೇಳಿದ್ದೀರಿ ಹಾಗಾದರೆ ಅಂಥಾ ಅರ್ಜಿಗಳು ಸರ್ಕಾರದ ಅನುಮೋದನೆಗಾಗಿ ಎಷ್ಟು ಬಂದಿವೆ ?

† ಶ್ರೀ ಎಚ್. ಎಂ. ಚನ್ನಬಸಪ್ಪ.—೭೫೦೦ ರೂಪಾಯಿಗಳನ್ನು ಗೊತ್ತು ಮಾಡಿರತಕ್ಕುದ್ದು ರಸ್ತೆಗಳನ್ನು ಉತ್ತಮಪಡಿಸುವುದಕ್ಕೇ ಹೊರತು ಹೊಸ ರಸ್ತೆಗಳನ್ನು ತಯಾರು ಮಾಡುವುದಕ್ಕಲ್ಲ.

ಶ್ರೀ ಚೌಡರೆಡ್ಡಿ.—ಗುಡ್ಡಗಾಡು, ಮರಳು ಪ್ರದೇಶದಲ್ಲಿ ರಸ್ತೆಗಳನ್ನು ನಿರ್ಮಾಣ ಮಾಡಲು ೭೫೦೦ ರೂಪಾಯಿಗಳಿಗಿಂತ ಜಾಸ್ತಿ ಖರ್ಚು ಮಾಡಲು ಸರ್ಕಾರದ ಅನುಮೋದನೆಗಾಗಿ ಚಿಂತಾಮಣಿ ತಾಲ್ಲೂಕಿನಿಂದ ಎಷ್ಟು ಅರ್ಜಿಗಳು ಬಂದಿವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ರೀತಿ ೭೫೦೦ ರೂಪಾಯಿಗಳಿಗಿಂತ ಜಾಸ್ತಿ ಹಣ ಬೇಕಾಗುತ್ತದೆ ಎಂದು ಅಲ್ಲಿಗ ಸಂಬಂಧಪಟ್ಟ ಸೂಪರಿನ್‌ಟೆಂಡಿಂಗ್ ಇಂಜಿನಿಯರು ಸರ್ಕಾರಕ್ಕೆ ಬರೆದರೆ, ಅದು ಅಗತ್ಯವಾಗಿದ್ದರೆ ಅದನ್ನು ಕೊಡೋಣ.

ಶ್ರೀ ಚೌಡರೆಡ್ಡಿ.—ಚಿಂತಾಮಣಿ ತಾಲ್ಲೂಕಿನಲ್ಲಿರುವ ಚಿನ್ನಸಂದ್ರದಿಂದ ಕೈವಾರದವರೆಗೆ ಇರುವ ರಸ್ತೆ ಮತ್ತು ಮೈಲಾಪುರದ ರಸ್ತೆ ಈ ಪ್ರದೇಶದಲ್ಲಿ ಗುಡ್ಡಗಾಡು ಇದೆ. ಈ ರಸ್ತೆಗೆ ೭೫೦೦ ರೂಪಾಯಿಗಳು ಖರ್ಚಾಗಿದೆ. ಮತ್ತೆ ಅಲ್ಲಿ ಜಾಸ್ತಿ ಖರ್ಚು ಮಾಡಿ ರಸ್ತೆ ಮಾಡುವುದಕ್ಕೆ ಪ್ರಾವಿಜನ್ ಇಲ್ಲದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ? ಮತ್ತು ಅಲ್ಲಿರತಕ್ಕ ಇಂಜಿನಿಯರು ದುಡ್ಡು ಬಂದರೆ ಖರ್ಚು ಮಾಡಿ ಕೆಲಸ ಮಾಡಿಸುತ್ತೇವೆ ಎಂದು ಹೇಳುತ್ತಾರೆ. ಅದು ತಮ್ಮ ತಮ್ಮ ಗಮನಕ್ಕೆ ಬಂದರೆ ಆ ಬಗ್ಗೆ ತಾವು ಆದೇಶವನ್ನು ಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವರು ಕೇಳಿದರೆಕ್ಷಿಹಣ ಇದ್ದರೆ ಖಂಡಿತವಾಗಿಯೂ ಕೊಡುತ್ತೇವೆ.

SRI CHOWDA REDDY.—Your order reads like this: "provision has been made in the Government order No. P. W. D. 127 CRM dated 31st August 1972 for incurring expenditure in excess of the ceiling after obtaining prior approval of Government". ಎಂದು ಇದೆ ಅವರು ಜಾಸ್ತಿ ಖರ್ಚು ಮಾಡುವುದಕ್ಕೆ ಸರ್ಕಾರಕ್ಕೆ ಬರೆಯಬೇಕು. ಅವರು ಆ ರೀತಿ ಸರ್ಕಾರಕ್ಕೆ ಬರೆಯದೆ ಹಾಗೆ ಕಂಳಿತುಕೊಂಡಿದ್ದಾರೆ. ೭೫೦೦ ರೂಪಾಯಿಗಳಿಗಿಂತ ಜಾಸ್ತಿ ಖರ್ಚು ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದಾರೆ.

SRI H. M. CHANNABASAPPA.—It is subject to the availability of funds allotted for Rural Communication Works.

ಅಧ್ಯಕ್ಷರು.—ದುಡ್ಡು ಇದ್ದರೆ ಕೊಡುತ್ತೇವೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಚೌಡರೆಡ್ಡಿ.—ಸೀಲಿಂಗ್ ಲಿಮಿಟ್‌ಗಿಂತ ಜಾಸ್ತಿ ಖರ್ಚು ಮಾಡಬೇಕಾದರೆ ಅಸಿಸ್ಟೆಂಟ್ ಇಂಜಿನಿಯರು ಸರ್ಕಾರಕ್ಕೆ ಬರೆದು ಮಂಜೂರಾತಿಯನ್ನು ಪಡೆಯಬೇಕೆಂದು ಇದೆ. ಅವರು ಬರೆಯದೇ ಇದ್ದರೆ ತಾವೇ ಅದನ್ನು ತರಿಸಿಕೊಂಡು ಮಾಡುತ್ತೀರಾ ?

SRI H. M. CHANNABASAPPA.—I want the hon. Member to understand that specific amount for rural Communication per taluk will be allotted and he will have to manage within the amount that has been allotted. It does not mean that I am prepared to give any amount of money. There is limitation placed on the Executive Engineer. Out of the allotment he must make this expenditure.

ಶ್ರೀ ಚೌಡರೆಡ್ಡಿ.—ಸೂಪರಿಂಟೆಂಡಿಂಗ್ ಇಂಜಿನಿಯರ್‌ಗೆ ಸೀಲಿಂಗ್ ಲಿಮಿಟ್‌ಗಿಂತ ಜಾಸ್ತಿ ಹಣ ಖರ್ಚು ಮಾಡುವುದಕ್ಕಾಗುವುದಿಲ್ಲ. ಜಾಸ್ತಿ ಖರ್ಚು ಮಾಡಬೇಕಾದರೆ ಸರ್ಕಾರಕ್ಕೆ ಬರೆದು ಅನುಮೋದನೆ ತೆಗೆದುಕೊಳ್ಳಬೇಕು. ಅಲ್ಲಿರತಕ್ಕ ಇಂಜಿನಿಯರ್ ಸರ್ಕಾರಕ್ಕೆ ಬರೆಯದೆ ಹಾಗೆಯೇ ಕುಳಿತುಕೊಂಡಿದ್ದಾರೆ. ಆದ್ದರಿಂದ ತಾವೇ ಅದನ್ನು ತರಿಸಿಕೊಂಡು ಅನುಮೋದನೆ ಮಾಡಿಕೊಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾನು ಈಗಾಗಲೇ ಈ ಬಗ್ಗೆ ಹೇಳಿದ್ದೇನೆ. Government has given direction stating that wherever there is need, they must request.

SRI BAPU GOWDA.—It is very clear in your answer supplied to us. But when the Member is asking some clarification you are giving misleading answers.

SRI H. M. CHANNABASAPPA.—I am so sorry that the hon. Member is making such remarks without any meterial ೫೦ ಮೈಲಿ ಅಥವಾ ೮೦ ಕಿಲೋಮೀಟರ್ ರಸ್ತೆಯನ್ನು ಫೇಜ್ಡ್ ಪ್ರೋಗ್ರಾಮ್ ಪ್ರಕಾರ ತೆಗೆದುಕೊಳ್ಳುತ್ತೇವೆ, ಅದನ್ನು ಇಷ್ಟು ದಿವಸಗಳಲ್ಲಿ ಪೂರೈಸಬೇಕು ಎಂದು ಬರೆದಿದ್ದೇವೆ. ಅದನ್ನು ಈ ವರ್ಷವೇ ತೆಗೆದುಕೊಳ್ಳುತ್ತೇವೆ ಎಂದು ಬರೆದಿಲ್ಲ.

ಶ್ರೀ ಸಿ. ಬೈರೇಗೌಡ.—ಈಗ ಬೆಲೆಗಳೆಲ್ಲಾ ಜಾಸ್ತಿಯಾಗಿವೆ. ಪಬ್ಲಿಕ್ ವರ್ಕ್ ಷೆಡ್ಯೂಲ್ ರೇಟ್ ಕೂಡ ರಿವೈಜ್ ಆಗಿದೆ. ಈ ದೃಷ್ಟಿಯಿಂದ ಈಗ ೭೫೦ ರೂಪಾಯಿ ಸೀಲಿಂಗ್ ಲಿಮಿಟ್ ಏನಿದೆ ಇದನ್ನು ಜಾಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಎಲ್ಲಾ ಕಡೆ ಜಾಸ್ತಿ ಮಾಡುವುದಕ್ಕಾಗುವುದಿಲ್ಲ. ಎಲ್ಲೆಲ್ಲಿ ಅವಶ್ಯಕವೋ ಅಲ್ಲಿ ಜಾಸ್ತಿ ಜಾಸ್ತಿ ಮಾಡುತ್ತೇವೆ.

ಶ್ರೀ ಸಿ. ಬೈರೇಗೌಡ—ಈಗ ಇರತಕ್ಕ ಸೀಲಿಂಗ್ ಲಿಮಿಟ್ ಹಿಂದೆ ಗೊತ್ತು ಮಾಡಿದ್ದು. ಈಗ ಒಂದಕ್ಕೆ ಒಂದೂವರೆಯಂಷ್ಟು ಹಣ ಖರ್ಚು ಮಾಡಬೇಕಾಗುತ್ತದೆ. ಇದನ್ನು ರಿವೈಜ್ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಈಗ ನಿಗದಿ ಮಾಡಿರತಕ್ಕೆ ಹಣದಲ್ಲಿ ಒಂದು ವೇಳೆ ಯಾವುದಾದರೂ ರಸ್ತೆ ಕೆಲಸ ಆಗಬೇಕಾದರೆ ಸೂಪರಿನ್‌ಟೆಂಡಿಂಗ್ ಇಂಜಿನಿಯರ್ ಬರೆದರೆ ಅಗತ್ಯವಾಗಿ ಹಣ ಕೊಡುತ್ತೇವೆ.

SRI AZEEZ SAIT.—The Minister has stated that 50 Kms. roads will be taken up whenever funds are available. I had very bad experience of going from Hassan to Mysore via K. R. Pet. It is humanly impossible to go on that road Have you ever experienced ?

SRI H. M. CHANNABASAPPA —I agree with you that the road is bad.

SRI AZEEZ SAIT.—There is a colossal waste of the public money in the P. W. Department because of not doing the things in a proper scientific way. This is the only Department which is not making use of the money properly in the public interest.

ಶ್ರೀ ಕೊಣಂದೂರು ಲಿಂಗಪ್ಪ —೧೯೭೨ನೇ ಇಸವಿಯಲ್ಲಿ ತಾವು ಷೆಡ್ಯೂಲ್ ರೇಟನ್ನು ನಿಗದಿ ಮಾಡಿದ್ದೀರಿ. ತಾವು ಒಂದು ಮೈಲಿಗೆ ೫೦,೦೦೦ ರೂಪಾಯಿಗಳನ್ನು ಕೊಟ್ಟರೆ ಅದು ಈಗ ಒಂದು ಫರ್ಲಾಂಗ್‌ಗೆ ಆಗುತ್ತದೆ. ಈಗ ಬೆಲೆಗಳು ಏರಿರುವುದರಿಂದ ಅದಕ್ಕೆ ತಕ್ಕಂತೆ ಅಭಿವೃದ್ಧಿಪಡಿಸಲಿಕೆ ಆಗುವುದಿಲ್ಲವೇ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಂದು ಕಿಲೋಮೀಟರಿಗೂ, ಇನ್ನೊಂದು ಕಿಲೋಮೀಟರಿಗೂ ಅಂತರ ನಿಗದಿ ಮಾಡಿದ್ದೇವೆ. ಯಾವಾಗ ಕೆಲಸ ಮಾಡುತ್ತಾರೋ ಆಗಿನ ಷೆಡ್ಯೂಲ್ ರೇಟಿಗೆ ಕೆಲಸ ಮಾಡುತ್ತಾರೆ. ಕೆಲವಾರು ಕೆಲಸಗಳಿಗೆ ಕೊಟ್ಟಿರುವ ಹಣ ಪೂರೈಸುವುದಕ್ಕೆ ಸಾಧ್ಯವಿಲ್ಲದೇ ಹೋದರೆ, ಹೆಚ್ಚಿಗೆ ಹಣವನ್ನು ಒದಗಿಸಿಕೊಡುತ್ತೇವೆ.

ಶ್ರೀ ಟಿ. ಎಂ. ಮಂಜುನಾಥ —ಈಗ ವಸ್ತುಗಳ ಬೆಲೆಗಳು ಇಳಿದಿರುವುದರಿಂದ ಷೆಡ್ಯೂಲ್ ರೇಟ್ ಕೂಡ ಕಡಿಮೆಯಾಗುವುದಿಲ್ಲವೇ ?

ಶ್ರೀ ಎಚ್. ಎಂ ಚನ್ನಬಸಪ್ಪ —ವಸ್ತುಗಳ ಬೆಲೆ ಹೆಚ್ಚಾಗಿದ್ದರೆ ಷೆಡ್ಯೂಲ್ ರೇಟನ್ನೂ ಸಹ ಸೂಪರಿಂಟೆಂಡಿಂಗ್ ಇಂಜಿನಿಯರ್ ಹೆಚ್ಚಿಗೆ ಮಾಡುತ್ತಾರೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ವಸ್ತುಗಳ ಬೆಲೆ ಇಳಿದಿದೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಚ್. ಎಂ. ಚನ್ನಬಸಪ್ಪ.—ಕೂಲಿ, ಕಲ್ಲಿನ ಬೆಲೆ ಮುಂತಾದವು ಕಡಿಮೆಯಾದಾಗ ಷೆಡ್ಯೂಲ್ ರೇಟನ್ನೂ ಕಡಿಮೆ ಮಾಡುತ್ತಾರೆ. ಕೂಲಿನಾಲಿಗಳು ಮತ್ತು ಕಲ್ಲಿನ ಬೆಲೆ ಇವೆರಡರ ಬೆಲೆ ಇಳಿದಾಗ, ಅದೂ ಕೂಡ ಇಳಿಯುತ್ತದೆ.

SRI M. MALLAPPA —May I know whether the Hon'ble Minister has fixed any time-limit for the implementation of this ambitious programme put up by him?

ಶ್ರೀ ಎಚ್. ಎಂ. ಚನ್ನಬಸಪ್ಪ.—೧೯೭೨ನೇ ಇಸವಿಯಲ್ಲಿ ಇದನ್ನು ಪ್ರಾರಂಭಮಾಡಿದಾಗ ೩ ವರ್ಷಗಳಲ್ಲಿ ಆಗಬೇಕು ಎಂದು ಅಂದಾಜು ಮಾಡಿದ್ದೆವು ಈ ಮಧ್ಯೆ ನಾನಾ ಅನಾನುಕೂಲಗಳು ಬಂದಿದ್ದರಿಂದ ಮತ್ತು ಉತ್ತರ ಕರ್ನಾಟಕದಲ್ಲಿ ಅಭಾವ ಪರಿಸ್ಥಿತಿ ಬಂದಾಗಿನಿಂದ ಈ ಕೆಲಸ ಸ್ವಲ್ಪ ಕುಂಠಿತವಾಯಿತು. ನಿಗದಿಯಾಗಿ ಕೆಲಸಮಾಡಬೇಕು ಎಂದು ಉದ್ದೇಶಪಟ್ಟು ಅದಕ್ಕೆ ಒಂದು ವಿಶೇಷವಾದ ಫಂಡನ್ನು ಮಾಡಿದ್ದೇವೆ. ಅದನ್ನು ಈ ಕೆಲಸಕ್ಕೆ ಮಂಡುಪಾಗಿಟ್ಟು ಪ್ರತಿ ತಾಲ್ಲೂಕಿಗೆ ಸಮಾನವಾಗಿ ಹಂಚಿಕೆ ಮಾಡುತ್ತಾ ಇರುವುದು ಎಲ್ಲರಿಗೂ ಗೊತ್ತಿದೆ.

ಶ್ರೀ ಎಂ. ಬಿ. ರಾಮಸ್ವಾಮಿ.—ಈ ಎಮರ್ಜೆನ್ಸಿ ಬಂದ ಮೇಲೆ ಸ್ಟೀಲ್ ಸಿಮೆಂಟ್ ಇತ್ಯಾದಿಗಳ ಬೆಲೆ ಕಡಿಮೆಯಾಗಿದೆಯೆಂದು ಹೇಳುತ್ತೀರೋ ಅಥವಾ ಹೆಚ್ಚಾಗಿದೆಯೆಂದು ಹೇಳುತ್ತೀರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಅವುಗಳ ಬೆಲೆ ಹೆಚ್ಚಾಗಿದೆ. ಕಡಿಮೆಯಾಗಿದೆ ಎನ್ನುವುದು ಚರ್ಚೆಯಲ್ಲಿ ಇಲ್ಲ. ಏನು ಷೆಡ್ಯೂಲ್ ರೇಟ್ ಇದೆ, ಅದರ ಪ್ರಕಾರ ಕೆಲಸ ಮಾಡುತ್ತಾರೆ. ಅದರಲ್ಲಿ ನಾವು ನಿಗದಿ ಮಾಡಿರತಕ್ಕ ಹಣ ಸಾಲದು ಎಂದು ಬರೆದರೆ, ಅದನ್ನು ಕೊಡುತ್ತೇವೆ.

ಶ್ರೀ ಕೊಣಂದೂರು ಲಿಂಗಪ್ಪ.—ಕಲ್ಲೂ, ಮಣ್ಣಿಗಳ ರೇಟ್ ತಮಗೆ ಗೊತ್ತಿಲ್ಲವೇ

ಶ್ರೀ ಎಚ್. ಎಂ: ಚನ್ನಬಸಪ್ಪ —ಅದು ಚರ್ಚೆಯಲ್ಲಿ ಇಲ್ಲ.

ಶ್ರೀ ಬಿ. ಬಸವಲಿಂಗಪ್ಪ.— ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾ, ಕುಂಠಿತವಾದ ಪರಿಸ್ಥಿತಿ ಬಗ್ಗೆ ಮಾತನಾಡಿದ್ದಾರೆ. ಕುಂಠಿತವಾದ ಪರಿಸ್ಥಿತಿ ಇವತ್ತೂ ಇದೆಯೋ ಅಥವಾ ಪರಿಹಾರವಾಗಿದೆಯೇ ಈ ಪರಿಸ್ಥಿತಿಯಿಂದ ನಮ್ಮ ತಾಲ್ಲೂಕಿನಲ್ಲಿ ಕೆಲಸಗಳಾಗಿಲ್ಲ. ಈ ಪರಿಸ್ಥಿತಿ ಕೊನೆಗೊಂಡು, ಒಳ್ಳೆಯ ಪರಿಸ್ಥಿತಿ ಯಾವಾಗ ಪ್ರಾರಂಭವಾಗುತ್ತದೆ

ಶ್ರೀ ಎಚ್. ಎಂ ಚನ್ನಬಸಪ್ಪ.—ಈಗ ಒಳ್ಳೆಯ ಪರಿಸ್ಥಿತಿ ಇದೆ, ಎಲ್ಲಾ ಕಡೆಗಳಲ್ಲಿ ರೂರಲ್ ಕಮ್ಯೂನಿಕೇಷನ್ ಕೆಲಸ ನಡೆಯುತ್ತಾ ಇದೆ. ಅದನ್ನು ತಾವು ಹೋಗಿ ನೋಡಬೇಕು.

ಶ್ರೀ ಚೌಡರೆಡ್ಡಿ.—ಒಂದು ಕಿಲೋ ಮೀಟರ್‌ಗೆ ೭,೫೦೦ ರೂಪಾಯಿಗಳೆಂದು ನಿಗದಿ ಮಾಡಿದ್ದೀರಿ. ಗುಡ್ಡಗಾಡು ಪ್ರದೇಶಗಳಲ್ಲಿ ಇದು ಸಾಕಾಗುವುದಿಲ್ಲ. ಅಲ್ಲಿನ ಅಸಿಸ್ಟೆಂಟ್ ಇಂಜನಿಯರ್ ಜಾಸ್ತಿಬೇಕು ಎಂದು ಬರೆದರೆ ಕೊಡುತ್ತೀರೋ

ಶ್ರೀ ಎಚ್ ಎಂ. ಚನ್ನಬಸಪ್ಪ.—೭,೫೦೦ ರೂಪಾಯಿಗಿಂತ ಹೆಚ್ಚಾಗಿ ಬೇಕು ಎಂದು ಬರೆದರೆ ಅಗತ್ಯವಾಗಿ ಒದಗಿಸಿ ಕೊಡುತ್ತೇವೆ ಎಂದು ನಾನು ಆಗಲೇ ಹೇಳಿದ್ದೆನೆ.

MADAM SPEAKER.—Now Questions are over